OS : 88/2019
P.W-1

ಹಿರಿಯ ಶ್ರೇಣಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ಕೂಡ್ಲಿಗಿ

ದಿನಾಂಕಃ 03.08.2023 ರಂದು ಸಾಕ್ಷಿದಾರರಿಗೆ, ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

**ಪಾಟೀ ಸವಾಲುಃ ಕೆ ಜೆ ಜಿ ವಕೀಲರಿಂದಃ**

20 ರಿಂದ 23 ನೇ ಪ್ರತಿವಾದಿಗಳು ನನ್ನ ಸಹೋದರಿಯರು. 2 ನೇ ವಾದಿ ನನ್ನ ಸಹೋದರ . ನಾವು ದಾಸರ ಶಾಂತಮ್ಮನ ಮಕ್ಕಳು. ದಾಸರ ನಾಗಮ್ಮ 1 ರಿಂದ 3 ನೇ ಪ್ರತಿವಾದಿಗಳ ತಾಯಿ . 12 ನೇ ಪ್ರತಿವಾದಿಯ ತಾಯಿ ದಾಸರ ಸಂಜೀವಮ್ಮ . 24,25 ನೇ ಪ್ರತಿವಾದಿಗಳು ನನ್ನ ತಾಯಿಯ ಸಹೋದರಿಯರು. ನನ್ನ ತಾಯಿಗೆ ಒಟ್ಟು 4 ಜನ ಸಹೋದರಿಯರು. ಅವರು ದಾಸರ ಹನುಮಪ್ಪನ ಮಕ್ಕಳು. ದಾವಾ ಆಸ್ತಿಗಳು ನನ್ನ ತಾಯಿಯ ಹಾಗೂ ಅವರ ಸಹೋದರಿಯರಿಗೆ ಪಿತಾರ್ಜಿತಯಿಂದ ಬಂದ ಆಸ್ತಿಗಳು. ದಾವಾ 2,3,5,7,8,9 ನನ್ನ ತಾಯಿಯ ತಂದೆ ಆಸ್ತಿಗಳು ಎಂದರೆ ಸರಿ . ಸಾಕ್ಷಿ ಬೇರೆ ಆಸ್ತಿಗಳು ಇವೆ ಎನ್ನುತ್ತಾರೆ. ಸದರಿ ಆಸ್ತಿಗಳು ದಿಃ 12.10.1995 ರಲ್ಲಿ ನಿಮ್ಮ ತಾಯಿ ಹಾಗೂ ಅವರ ಸಹೋದರಿಯರ ನಡುವೆ ವಿಭಾಗ ಆಗಿದೆ ಎಂದರೆ ಸರಿಯಲ್ಲ. ಸದರಿ ವಿಭಾಗದಲ್ಲಿ ನಿಮ್ಮ ತಾಯಿಯ ಸಹೋದರಿಯರಿಗೆ ಸೂಕ್ತ ಭಾಗ ಬಂದಿದೆ ಎಂದರೆ ಸರಿಯಲ್ಲ. ವಿಭಾಗದ ಪತ್ರದ ಆದಾರದ ಮೇಲೆ ಕಂದಾಯದ ದಾಖಲೆಗಳು ಆಗಿವೆ ಎಂದರೆ ಸರಿಯಲ್ಲ. ಯಾವ ಆಧಾರದ ಮೇಲೆ ಕಂದಾಯದ ದಾಖಲೆಗಳು ಬದಲಾಯಿಸಲಾಗಿವೆ ಎಂದರೆ ಗೊತ್ತಿಲ್ಲ. ಎಂ ಆರ್ ನಂ.39/1995-96 ರ ಆದಾರದಂತೆ ಕಂದಾಯದ ದಾಖಲೆಗಳು ಆಗಿವೆ ಎಂದರೆ ಸರಿಯಲ್ಲ. ಸದರಿ ಎಂ ಆರ್ ನ್ನು ನನ್ನ ತಾಯಿ ಜೀವಂತ ಇದ್ದಾಗ ನಂತರ ನಾನು ಪ್ರಶ್ನೆ ಮಾಡಿಲ್ಲ. ಕಂದಾಯದ ದಾಖಲೆಯಂತೆ ಅವರು ಅವರು ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ಜಮೀನುಗಳನ್ನು ಕೋರ್ ನೀಡಿಲಾಗಿದೆ. ಬೇರೆ ವಿವರಗಳು ಗೊತ್ತಿಲ್ಲ.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.
(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ).

ಓ,ಹೇ,ಕೇ,ಸರಿ ಇದೆ,

ಹಿ.ಸಿ.ಜೆ ಮತ್ತು ಜೆ.ಎಂ.ಎಫ್.ಸಿ
ಕೂಡ್ಲಿಗಿ.